**ದಿನಾಂಕ 30.05.2023 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಶ್ರೀ ಕೆ.ಯು. ವಕೀಲರಿಂದಃ**

1. ಸಾಕ್ಷಿದಾರರು ಮಾಡಿರುವ ಸಹಿಗಳನ್ನು ನಾನು ನೋಡಿದ್ದಲ್ಲಿ ಗುರುತಿಸುತ್ತೇನೆ. ಎಸ್.ಕೆ.ಲಕ್ಷ್ಮೀನಾರಾಯಣ ಬಿನ್ ಜಿ.ಕಾಮಯ್ಯ, ಬನ್ನಿನಗರ, ಶಿರಾಟೌನ್ ಎಂದರೆ ನಾನೇ ಆದರೆ ಈಗ ನನಗೆ ತೋರಿಸುತ್ತಿರುವ ಕ್ರಯ ಪತ್ರ ದಾಖಲಾತಿಯಲ್ಲಿ ಇರುವುದು ನಾನಲ್ಲ ಎಂದು ನುಡಿಯುತ್ತಾರೆ. ಸೈಟ್ ನಂ.12 ನ್ನು ದಿನಾಂಕ 01.06.2009 ರಲ್ಲಿ ಗಫರ್ ಬೇಗ್ ರವರು ಸರೋಜಮ್ಮ ಎನ್ನುವವರಿಗೆ ರಿಜಿಸ್ಟರ್ ಕ್ರಯ ಪತ್ರದ ಮುಖಾಂತರ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಮತ್ತೊಂದು ಕ್ರಯ ಪತ್ರವನ್ನು ತೋರಿಸಲಾಗಿ ಅದರಲ್ಲಿ ಇರುವ ಸಹಿ ತಮ್ಮದೇ ಎಂದು ತೋರಿಸಿದ್ದಲ್ಲಿ ಸಾಕ್ಷಿ ನಿರಾಕರಿಸಿರುತ್ತಾರೆ. ಬನ್ನಿನಗರದಲ್ಲಿ ಇರುವ ಲಕ್ಷ್ಮೀನಾರಾಯಣ ಬಿನ್ ಕಾಮಯ್ಯ ನಾನೊಬ್ಬನೇ ಎಂದರೆ ಸರಿಯಲ್ಲ ಇನ್ನೊಬ್ಬ ಲಕ್ಷ್ಮೀನಾರಾಯಣ ಇದ್ದಾರೆ ಎಂದು ನುಡಿಯುತ್ತಾರೆ. ಅವರ ತಂದೆಯ ಹೆಸರೂ ಸಹ ಕಾಮಯ್ಯ. ಅವರ ಛಾಯಾ ಚಿತ್ರ ಮತ್ತು ಸಹಿ ನೋಡಿದರೆ ಗುರುತಿಸುತ್ತೀರಾ ಎಂದರೆ ಸಾಕ್ಷಿಯು ಅವರ ಸಹಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.
2. ನಿ.ಪಿ.12 ರಲ್ಲಿ ಎಸ್.ಎಸ್.ಗಫರ್ ಬೇಗ್ ನ್ನುವುದನ್ನು ಅಳಿಸಿ ಎಸ್.ಜೆ. ಗಫರ್ ಬೇಗ್ ಎಂದು ಟೈಪ್ ಮಾಡಿಸಿರುವುದು ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದನ್ನು ನಾವು ಮಾಡಿಸಿಲ್ಲ ಗಫರ್ ಬೇಗ್ ರವರೇ ಮಾಡಿಸಿದ್ದಾರೆ ಎಂದು ನುಡಿಯುತ್ತಾರೆ. ಈ ಮೊದಲು ಗಫರ್ ಬೇಗ್ ರವರಿಂದ ನಾನು ಯಾವುದೇ ಸೈಟನ್ನು ಖರೀದಿ ಮಾಡಿಲ್ಲ.

   ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿ ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**